# ಸ್ವಾಮಿ ವಿವೇಕಾನಂದರ ಸಮನ್ವಯ ಸಂದೇಶ

ನಾಗೇಶ್ ರಾವ್ ಎಲ್.ಜಿ.

ಯುಗನಾಯಕ ಸ್ವಾಮಿ ವಿವೇಕಾನಂದರ ಋಷಿಸದೃಶ ಬಹುಮುಖೀ ವ್ಯಕ್ತಿತ್ವ, ಅಗಾಧ ಆಧ್ಯಾತ್ಮಿಕ ಶಕ್ತಿ, ಅಸಾಧಾರಣ ಜ್ಞಾನ ಸಂಪನ್ನತೆ, ಮಾನವತೆಯ ಬಗ್ಗೆ ಅವರು ಹೊಂದಿದ್ದ ಕಾಳಜಿ ಇವುಗಳನ್ನು ಕುರಿತು ಚಿಂತಿಸಿದಷ್ಟೂ ಅವರ ವ್ಯಕ್ತಿತ್ವ ಇನ್ನಷ್ಟು ಎತ್ತರಕ್ಕೆ ಏರುತ್ತದೆ. ಈ ಕುರಿತು ಬರೆದಿರುವ ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಾಯಕ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ಅವರು ಬೆಂಗಳೂರು ಆಶ್ರಮದ ಭಕ್ತರು; ಭಾಷಾಂತರವೇ ಮೊದಲಾದ ಹಲವು ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಪ್ರಸ್ತುತ ಅವರು ಮೈಸೂರಿನಲ್ಲಿ ವಾಸವಾಗಿದ್ದಾರೆ.

ಸ್ವಾಮಿ ವಿವೇಕಾನಂದರು ಭಾರತಕ್ಕೆ ಸೇರಿದವರು, ಅಂತೆಯೇ ಇಡೀ ವಿಶ್ವಕ್ಕೆ ಸೇರಿದವರು. ಅವರ ಸಂದೇಶಗಳು ಜಾಗತಿಕ ಸಂದೇಶಗಳು. ಅವರು ಜಗತ್ತಿಗೆ ಸಾರಿದ ಸಂದೇಶ ವೇದಾಂತದ ಸಂದೇಶ. ವೇದಾಂತವು ಮೊದಲೇ ತಿಳಿದಿತ್ತು. ಆದರೆ ಸ್ವಾಮೀಜಿಯವರು ಬೋಧಿಸಿದ ರೀತಿಯಲ್ಲಿ ತಿಳಿದಿರಲಿಲ್ಲ. ಮನುಷ್ಯನಲ್ಲಿ ದೈವತ್ವದ ಕಿಡಿಯಿದೆ, ಅವನು ಪಾಪ ಮಾಡಬಹುದು, ಆದರೆ ಅವನು ಜನ್ಮತಃ ಪಾಪಿಯಲ್ಲ. ಸತ್ಯವು ಒಂದೇ. ಅದನ್ನು ಅನೇಕ ದೃಷ್ಟಿಯಿಂದ ನೋಡಬಹುದು. ಜಗತ್ತಿನ ಎಲ್ಲ ಧರ್ಮಗಳೂ ಆ ಒಂದೇ ಸತ್ಯದ ವಿವಿಧ ಅಭಿವ್ಯಕ್ತಿಗಳು. ಆ ಸತ್ಯದ ಕಡೆಗೆ ಹೋಗುವ ವಿವಿಧ ಮಾರ್ಗಗಳು. ಈ ವೈವಿಧ್ಯತೆಗಳು ಇರುವುದರಿಂದ ವಿವಿಧ ಮನೋಭಾವದ ಜನರು ತಮ್ಮದೇ ಆದ ರೀತಿಯಲ್ಲಿ ಧರ್ಮವನ್ನು ಆಚರಿಸಲು ಅವಕಾಶವಾಗುತ್ತದೆ. ಅನೇಕ ಧರ್ಮಗಳಿರುವುದರಲ್ಲಿ ತಪ್ಪೇನಿಲ್ಲ. ಆದರೆ ತಪ್ಪು ಇರುವುದು 'ತನ್ನದೇ ಸರಿ' ಎಂಬ ಭಾವನೆಯಲ್ಲಿ. ಅದು ಹೋಗಬೇಕು — ಇದು ಸಂಕ್ಷಿಪ್ತವಾಗಿ ಸ್ವಾಮಿ ವಿವೇಕಾನಂದರು ೧೮೯೩ರ ಅಮೆರಿಕಾದ ಸರ್ವಧರ್ಮ ಸಮ್ಮೇಳನದಲ್ಲಿ ನೀಡಿದ ಸಂದೇಶ. ಅವರು ಆ ಸಂದೇಶವನ್ನು ನೀಡಿ ೧೨೬ ವರ್ಷಗಳು ಕಳೆದಿವೆ. ಅವು ಇಂದಿಗೂ ಪ್ರಸ್ತುತವಾಗಿವೆ.

ಪಾಶ್ಚಿಮಾತ್ಯ ಜನರು ಮೂಢನಂಬಿಕೆಗಳ, ಡಾಂಭಿಕತೆಯ ಉಸಿರು ಕಟ್ಟುವ ವಾತಾವರಣದಲ್ಲಿದ್ದರು. ಅವರಿಗೆ ಈ ಸಂದೇಶವು ಸ್ವಚ್ಛ ತಂಗಾಳಿಯಂತೆ ಬಂದಿತು. ಒಂದು ಹೊಸ ಜೀವನ ರೀತಿಯನ್ನು ತೋರಿಸಿತು. 'ಬದುಕು, ಬದುಕಲು ಬಿಡು'- ಇಡೀ ಪ್ರಪಂಚವೇ ಒಂದು ಕುಟುಂಬದಂತೆ ಎಂಬಂತೆ ಬದುಕಬೇಕೆಂದು ಅವರು ಬೋಧಿಸಿದರು. ಸಂಕುಚಿತತೆಯ ಗೋಡೆಗಳು ಮುರಿದು ಬೀಳಲು ಪ್ರಾರಂಭವಾದವು. ಇತರರ ಅಭಿಪ್ರಾಯಗಳನ್ನು ಕೇಳಲು ಮನಸ್ಸುಗಳು ತೆರೆದುಕೊಂಡವು.

ಇದನ್ನು ಘನವೆತ್ತ ಮರಿನ್ ಸ್ನೇಲ್‌ರವರು ಮನಗಂಡು ಈ ರೀತಿ ಹೇಳಿರುತ್ತಾರೆ — ''ವಿಶ್ವಧರ್ಮ ಸಮ್ಮೇಳನವು ಕ್ರೈಸ್ತ ಪ್ರಪಂಚಕ್ಕೆ, ಅದರಲ್ಲಿಯೂ ಮುಖ್ಯವಾಗಿ ಅಮೆರಿಕಾಗೆ ತಿಳಿಸಿದ ಮುಖ್ಯ ಸಂದೇಶವೆಂದರೆ — ಕ್ರೈಸ್ತಧರ್ಮಕ್ಕಿಂತಲೂ ಹೆಚ್ಚು ಗೌರವಾನ್ವಿತ ಧರ್ಮಗಳು ಜಗತ್ತಿನಲ್ಲಿ ಇವೆ. ಅವು ತತ್ತ್ವಶಾಸ್ತ್ರದ ಆಳದಲ್ಲಿ, ಆಧ್ಯಾತ್ಮಿಕ ಸ್ತರದಲ್ಲಿ ಮತ್ತು ಸ್ವತಂತ್ರ ಆಲೋಚನೆಯ ಶಕ್ತಿಯಲ್ಲಿ ಶ್ರೇಷ್ಠವಾದುದಾಗಿವೆ.'' ಮರ್ವಿನ್ ಸ್ನೇಲ್‌ರವರು ಸ್ವಾಮಿ ವಿವೇಕಾನಂದರ ಸಂದೇಶಗಳ ಆಧಾರದ ಮೇಲೆ ಈ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ.

ಸ್ವಾಮಿ ವಿವೇಕಾನಂದರು ತಮ್ಮ ಅತ್ಯುತ್ತಮ ಸಂದೇಶಗಳನ್ನು ಪಾಶ್ಚಿಮಾತ್ಯರಿಗೆ ಬೋಧಿಸಿದ್ದಾರೆಂದು ಕೆಲವು ಪಾಶ್ಚಾತ್ಯ ಚಿಂತಕರು ಅಭಿಪ್ರಾಯಪಡುತ್ತಾರೆ. ಆದರೆ ಅವು ಜಾಗತಿಕ ಸಂದೇಶಗಳು. ಅವು ಧರ್ಮಗಳ ಎಲ್ಲೆಗಳನ್ನು ಮೀರಿ, ರಾಷ್ಟ್ರೀಯತೆ ಅಥವಾ ಕಾಲವನ್ನು ಮೀರಿ ಸಕಲ ಮಾನವಕುಲಕ್ಕೆ ಅನ್ವಯವಾಗುವ ಸಾರ್ವತ್ರಿಕ ಸಂದೇಶಗಳು.

ಅಮೆರಿಕಾದಲ್ಲಿ ಪ್ರಕಟವಾಗಿರುವ 'ದಿ ಗಿಫ್ಟ್ ಅನ್ ಓಪನ್ಡ್' (The Gift Unopened) ಎಂಬ ಪುಸ್ತಕದಲ್ಲಿ ಶ್ರೀಮತಿ ಎಲಿಯನಾರ್ ಸ್ಟಾರ್ಕ್‌ರವರು (Elianor Stark) ಹೀಗೆ ಹೇಳಿರುತ್ತಾರೆ: ''ಅಮೆರಿಕಾ ದೇಶದ ಕೆಲವು ಮುಖ್ಯ ಆವಶ್ಯಕತೆಗಳನ್ನು — ಸ್ವಾಮಿ ವಿವೇಕಾನಂದರ ಸಂದೇಶಗಳು ಒಳಗೊಂಡಿದ್ದವು. ಆ ಆವಶ್ಯಕತೆಗಳು ಯಾವುವು? ಜೀವನವನ್ನು ಕೆಲವು ಆಧ್ಯಾತ್ಮಿಕ ಹಾಗೂ ನೈತಿಕ ನೆಲೆಗಟ್ಟಿನ ಮೇಲೆ, ತಳಹದಿಯ ಮೇಲೆ ರೂಪಿಸಿಕೊಳ್ಳುವ ಕಡೆಗೆ ಗಮನ ಹರಿಸಬೇಕು. ಅಮೆರಿಕಾದ ಸಂಸ್ಥಾಪಕರು ಧರ್ಮ ಮತ್ತು ನೀತಿಯ ಮೌಲ್ಯಗಳಿಗೆ ಪ್ರಾಮುಖ್ಯತೆ ಕೊಟ್ಟಿದ್ದರು. ಆದರೆ ಕಾಲಕ್ರಮೇಣ ಜನರು ತಮ್ಮ ಭೌತಿಕ ಪ್ರಗತಿಯಲ್ಲಿ ಆ ಮೌಲ್ಯಗಳನ್ನು ಕಡೆಗಣಿಸಿದರು. ಅಮೆರಿಕದ ಪ್ರಜೆಗಳು ಕಳೆದುಕೊಂಡಿದ್ದ ನೆಲೆಯನ್ನು ಮತ್ತೆ ದೊರಕಿಸಲು ಭಗವತ್ ಪ್ರೇರಣೆಯೇ ಸ್ವಾಮಿ ವಿವೇಕಾನಂದರನ್ನು ಕರೆದು ತಂದಿತು. ಕ್ರಿಸ್ಟೋಫರ್ ಕೊಲಂಬಸ್‌ನು ಅಮೆರಿಕದ ನೆಲವನ್ನು ಕಂಡುಹಿಡಿದನು. ಸ್ವಾಮಿ ವಿವೇಕಾನಂದರು ಅದರ ಆತ್ಮವನ್ನು ಕಂಡುಹಿಡಿದರು ಎಂದು ಆ ಲೇಖಕಿ ಹೇಳುತ್ತಾರೆ. ಅವರ ಪ್ರಕಾರ ವಿವೇಕಾನಂದರ ಶ್ರೇಷ್ಠ ಕೊಡುಗೆಯು ವೇದಾಂತ. ಅದು ಅಮೆರಿಕನ್ನರ ಎಲ್ಲ ನ್ಯೂನತೆಗಳನ್ನೂ ಅಪರಿಪೂರ್ಣತೆಯನ್ನು ತೆಗೆದುಹಾಕಿ ಅವರ ಜೀವನವನ್ನು ಸಂಪನ್ನವಾಗಿಸಬಲ್ಲದು. ಆದರೆ ದುರದೃಷ್ಟವಶಾತ್ ಆ ಕೊಡುಗೆಯನ್ನು ಸ್ವೀಕರಿಸಿ ತೆರೆದು ನೋಡಿಲ್ಲ. ಇನ್ನೂ ಕೂಡ ವೇದಾಂತದ ಅಮೋಘ ಸತ್ಯಗಳನ್ನು ತಿಳಿದುಕೊಂಡಿಲ್ಲ. ಅದನ್ನು ಕಾರ್ಯಗತ ಮಾಡಿಕೊಂಡರೆ ಅದು

ಒಂದು ರೀತಿಯ 'ಹೊಸ ಅಮೆರಿಕದ ಕ್ರಾಂತಿ' ಉಂಟು ಮಾಡು ತ್ತದೆ'' ಎಂದು ಲೇಖಕಿ ಹೇಳುತ್ತಾರೆ.

ಅರಣ್ಯದಲ್ಲಿ ವಾಸಿಸುವ ಕೆಲವು ಜನರಿಗೆ ಮಾತ್ರ ವೇದಾಂತವು ಸಂಬಂಧಿಸಿದ್ದಲ್ಲ. ವೇದಾಂತವು ಎಲ್ಲ ಮಾನವರಿಗೂ ಅನ್ವಯಿಸು ತ್ತದೆ. ವೇದಾಂತ ಸತ್ಯಗಳಾದ ದಿವ್ಯತೆ ಮತ್ತು ಏಕತೆಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅನುಸರಿಸಬಹುದು. ವೇದಾಂತ ವನ್ನು ದೈನಂದಿನ ಜೀವನದ ಅನುಷ್ಠಾನ ವೇದಾಂತವನ್ನಾಗಿಸು ವುದು ನನ್ನ ಜೀವನದ ಕೆಲಸವೆಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಆದುದರಿಂದ ಸರ್ವಧರ್ಮ ಸಮ್ಮೇಳನದಲ್ಲಿ ಮತ್ತು ಅನಂತರ ಮಾನವನಲ್ಲಿರುವ ದೈವತ್ವವನ್ನು ಮತ್ತು ಅದರ ಆಧಾರದ ಮೇಲೆ ಬದುಕನ್ನು ಕಟ್ಟಿಕೊಳ್ಳುವುದನ್ನು ಸ್ವಾಮೀಜಿ ಹೇಳಿದರು. ಈ ಏಕತೆಯನ್ನು ಮತ್ತು ದಿವ್ಯತೆಯನ್ನು ಕಡೆಗಣಿಸಿದ ತಪ್ಪಿನಿಂದಾಗಿ ವ್ಯಕ್ತಿಯ ಮಟ್ಟದಲ್ಲಿ, ಸಾಮಾಜಿಕ ಮಟ್ಟದಲ್ಲಿ, ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಿನ್ನತೆಯನ್ನೂ ಅಸ ಹನೆಯನ್ನೂ ಕಾಣುತ್ತಿದ್ದೇವೆ. ಅಂದರೆ ರಾಜಕೀಯ, ಧಾರ್ಮಿಕ ಮತ್ತು ಜನಾಂಗೀಯ ಘರ್ಷಣೆಗಳಿಗೆ ನಾವು ಈ ದೈವಿಕ ಏಕ ತೆಯ ಕೊಂಡಿಯನ್ನು ಮರೆತಿರುವುದೇ ಕಾರಣವಾಗಿದೆ. ಸ್ವಾಮೀ ಜಿಯವರ ಸಮನ್ವಯ ಮತ್ತು ಶಾಂತಿಯ ಸಂದೇಶವು ಇಂದಿಗೆ ಹೆಚ್ಚು ಪ್ರಸ್ತುತವಾಗಿದೆ. *(ಆಧಾರ: 'Swami Viveka nanda- The Friend of All', ಜೂನ್ ೨೦೧೭, ಪುಟ ೧೦೨-೦೪)*

ವಿಶ್ವಧರ್ಮ ಸಮ್ಮೇಳನದ ಉಪನ್ಯಾಸಗಳಲ್ಲಿ ಸ್ವಾಮಿ ವಿವೇಕಾ ನಂದರು ಗಣ್ಯ ಶ್ರೋತೃ ಸಮುದಾಯದ ಮುಂದೆ ಮನುಕುಲದ ಸಾರ್ವತ್ರಿಕ ಧರ್ಮವಾದ ವೇದಾಂತ ಸತ್ಯಗಳನ್ನು ಹೇಳಿದರು. ಯುಗಾವತಾರ ಶ್ರೀರಾಮಕೃಷ್ಣರ ಧೀರ ಶಿಷ್ಯರಾದ ಸ್ವಾಮಿ ವಿವೇ ಕಾನಂದರಲ್ಲದೆ ಮತ್ತಾರು ಇಂತಹ ಉದಾತ್ತ ಸಂದೇಶಗಳನ್ನು ನೀಡಬಲ್ಲರು! ಅವರು ಹೇಳಿದರು: ''ಸಾರ್ವತ್ರಿಕ ವಿಶ್ವಧರ್ಮ ವೊಂದು ಎಂದಾದರೂ ಇರಬೇಕಾದರೆ ಅದು ದೇಶ ಕಾಲಗಳ ನಿರ್ದಿಷ್ಟ ನೆಲೆ ಇಲ್ಲದ್ದಾಗಿರಬೇಕು. ಅದನ್ನು ಬೋಧಿಸುತ್ತಿರುವ ಭಗವಂತನಂತೆ ಆ ಧರ್ಮವೂ ಅನಂತವಾಗಿರಬೇಕು. ಅದರ ಸೂರ್ಯನು ಕೃಷ್ಣ-ಕ್ರಿಸ್ತರ ಅನುಯಾಯಿಗಳ ಮೇಲೆ, ಸಂತರ ಪಾಪಿಗಳ ಮೇಲೆ ಏಕಪ್ರಕಾರವಾಗಿ ಪ್ರಕಾಶಿಸಬೇಕು. ಅದು ಬ್ರಾಹ್ಮಣ ಅಥವಾ ಬೌದ್ಧ, ಕ್ರೈಸ್ತ ಅಥವಾ ಮಹಮ್ಮದೀಯ ಆಗಿರಕೂಡದು, ಇವೆಲ್ಲವುಗಳ ಮೊತ್ತವಾಗಿರಬೇಕು. ಆದರೆ ಬೆಳ ವಣಿಗೆಗೆ ಅನಂತ ಅವಕಾಶವುಳ್ಳದ್ದಾಗಿರಬೇಕು. ಪಶುವಿಗಿಂತ ದೂರ ವೇನಲ್ಲದ, ಕಾಲಡಿ ಹೊರಳುತ್ತಿರುವ ನಿಕೃಷ್ಟ ಅನಾಗರಿಕನಿಂದ ಹಿಡಿದು ಬಹುತೇಕ ಮಾನವತೆಯನ್ನು ಮೀರಿ ಮೆದುಳು, ಹೃದಯಗಳ ಗುಣಗಳಿಂದ ಎತ್ತರಕ್ಕೇರಿದ ಅತ್ಯುನ್ನತ ಮಾನವನ ವರೆಗೆ ಪ್ರತಿಯೊಬ್ಬ ಮನುಷ್ಯ ಜೀವಿಗೂ ತನ್ನ ಉದಾರತೆಯಲ್ಲಿ ಸ್ಥಾನವುಳ್ಳದ್ದಾಗಿರಬೇಕು. ಅದು ತನ್ನ ಸಮಾಜ ವ್ಯವಸ್ಥೆಯಲ್ಲಿ ಹಿಂಸೆಗೆ ಅಥವಾ ಅಸಹಿಷ್ಣುತೆಗೆ ಸ್ಥಾನವಿಲ್ಲದ, ಪ್ರತಿಯೊಂದು ಗಂಡುಹೆಣ್ಣಿನಲ್ಲೂ ದೈವಿಕತೆಯನ್ನು ಗುರುತಿಸುವ ಧರ್ಮವಾಗಿರ ಬೇಕು. ಅದರ ಸರ್ವವ್ಯಾಪೀ ಶಕ್ತಿಗಳು ಮನುಕುಲಕ್ಕೆ ತನ್ನ ನೈಜ ದೈವಿಕ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳಲು ನೆರವಾಗುವಲ್ಲಿ ಕೇಂದ್ರೀಕೃತವಾಗಿರಬೇಕು. ಅಂತಹ ಧರ್ಮವನ್ನು ಕೊಡಿ. ಕ್ರೈಸ್ತನು ಹಿಂದೂ ಅಥವಾ ಬೌದ್ಧನಾಗಬೇಕಿಲ್ಲ. ಅಥವಾ ಹಿಂದು ಇಲ್ಲವೆ ಬೌದ್ಧನು ಕ್ರೈಸ್ತನಾಗಬೇಕಿಲ್ಲ. ಪ್ರತಿಯೊಬ್ಬರೂ ಇತರರ ಮನೋ ಧರ್ಮವನ್ನು ಅರಿತು ಅಳವಡಿಸಿಕೊಳ್ಳಬೇಕು. ಆದರೂ ತನ್ನ ವ್ಯಕ್ತಿ ವೈಶಿಷ್ಟ್ಯವನ್ನು ಉಳಿಸಿಕೊಂಡು ತನ್ನ ಸ್ವಂತ ವಿಕಾಸ ನಿಯ ಮಕ್ಕೆ ಅನುಗುಣವಾಗಿ ಬೆಳೆಯಬೇಕು.'' *('ಸ್ಫೂರ್ತಿ', ಶ್ರೀರಾಮ ಕೃಷ್ಣ ಆಶ್ರಮ, ಮೈಸೂರು. ೨೦೧೭ ಪುಟ ೧೮೭)*

ಸ್ವಾಮಿ ವಿವೇಕಾನಂದರು ಮುದುವರಿದು ಹೀಗೆ ಹೇಳಿದರು: ''ಅನುಭಾವದ ಹಿನ್ನೆಲೆಯಲ್ಲಿ ಸಮನ್ವಯ ಸ್ವೀಕಾರದ ಹಿನ್ನೆಲೆ ಯಲ್ಲಿ ನಾವು ಸತ್ಯವನ್ನು ಹುಡುಕಬೇಕು. ವಿಜ್ಞಾನವೂ ಬೇಕು, ಅದರ ಜೊತೆಗೆ ಧರ್ಮ ಅಧ್ಯಾತ್ಮವೂ ಬೇಕು. ಸತ್ಯ ಒಂದೇ. ಹೊರಗಡೆಯಾದರೂ ಹುಡುಕಬಹುದು, ಒಳಗಡೆಯಾದರೂ ಹುಡುಕಬಹುದು. ವ್ಯಕ್ತ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ವಿಜ್ಞಾನ ಬೇಕು. ಅವ್ಯಕ್ತ ಪ್ರಪಂಚವನ್ನು ಅರಿಯಲು ಧರ್ಮ ಮತ್ತು ದೇವರು ಬೇಕು. ವಿಜ್ಞಾನ ಮತ್ತು ಧರ್ಮ ಎರಡೂ ಆವಶ್ಯಕ. ಅವು ಪರಸ್ಪರ ಪೂರಕ. ನೂರಾರು ದೇವತೆಗಳು ನಮಗೆ ಬೇಕಾದುದನ್ನು ಕೊಡುವುದಿಲ್ಲ. ಬಡತನವನ್ನು ನೀಗುವುದಿಲ್ಲ. ನಾವು ಸಕಲ ಪ್ರಯತ್ನ ಮಾಡಬೇಕು. ಮೂಢನಂಬಿಕೆಗಳನ್ನು ಬಿಡಬೇಕು'' ಎಂದು ಸ್ವಾಮೀಜಿ ಹೇಳಿದರು.

ಹೀಗೆ ಸ್ವಾಮಿ ವಿವೇಕಾನಂದರು ತಮ್ಮ ಗುರುವಿನ ಉದ್ಧಾರಕ ಶಕ್ತಿಯನ್ನೂ, ಅನುಗ್ರಹವನ್ನೂ ಪಡೆದುಕೊಂಡು ವಿಶ್ವಮಾನವ ಭಾವನೆಯನ್ನೂ ಆತ್ಮನ ನಿರಂಕುಶ ಸಾರ್ವಭೌಮತ್ವವನ್ನೂ ಜಗತ್ತಿ ನಾದ್ಯಂತ ಬೋಧಿಸಿದರು.

ಸ್ವಾಮಿ ವಿವೇಕಾನಂದರ ಒಂದು ಸಂದೇಶದೊಂದಿಗೆ ಈ ಲೇಖನವನ್ನು ಮುಗಿಸುತ್ತೇನೆ: ''ಪ್ರತಿಯೊಂದು ಆತ್ಮನಲ್ಲಿಯೂ ದಿವ್ಯತೆ ಹುದುಗಿರುವುದು. ಈ ಸುಪ್ತವಾದ ದಿವ್ಯತೆಯನ್ನು ಬಾಹ್ಯ ಮತ್ತು ಆಂತರಿಕ ಪ್ರಕೃತಿಯ ನಿಗ್ರಹದಿಂದ ವ್ಯಕ್ತಪಡಿಸು ವುದೇ ಜೀವನದ ಗುರಿ.

''ಇದನ್ನು ಕರ್ಮಯೋಗದಿಂದಾಗಲಿ, ಭಕ್ತಿಯೋಗದಿಂದಾ ಗಲಿ, ರಾಜಯೋಗದಿಂದಾಗಲಿ, ಜ್ಞಾನಯೋಗದಿಂದಾಗಲಿ ಅಥವಾ ಎಲ್ಲಾ ಮಾರ್ಗಗಳ ಸಂಯೋಗದಿಂದಾಗಲಿ ಸಾಧಿಸಿ ಮುಕ್ತರಾಗಿ.

''ಇದೇ ಧರ್ಮದ ಸರ್ವಸ್ವ. ಸಿದ್ಧಾಂತ, ನಂಬಿಕೆ, ಬಾಹ್ಯಾ ಚಾರ, ಪವಿತ್ರ ಗ್ರಂಥ, ದೇವಸ್ಥಾನ, ವಿಗ್ರಹ — ಇವೆಲ್ಲಾ ಗೌಣ.''